ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಅನುಭವಿಸುತ್ತಿರುವ ನಷ್ಟವನ್ನು ಕಡಿಮೆ ಮಾಡಿ ಆರ್ಥಿಕ ಸುಸ್ಥಿತಿಯನ್ನು ಪಡೆಯಲು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿರುತ್ತದೆ.

೧ ಅಲ್ಯೂಮಿನಿಯಂನಿಂದ ಬಸ್ ಬಾಡಿಗಳನ್ನು ನಿರ್ಮಿಸಿ, ಒಟ್ಟು ವಾಹನದ ತೂಕವನ್ನು ಕಡಿಮೆ ಮಾಡಿ ತನ್ಮೂಲಕ ಇಂಧನ ಟೈರುಗಳು ಬಿಡಿಭಾಗಗಳ ಬಳಕೆಯನ್ನು ಉತ್ತಮಪಡಿಸುವುದು.

೨ ಸುಧಾರಿತ ಕ್ರಮಗಳನ್ನು ಅಳವಡಿಸಿ ಟೈರುಗಳನ್ನು ರಿಟ್ರೇಡ್ ಮಾಡುವುದರ ಮೂಲಕ ಟೈರುಗಳಿಂದ ಹೆಚ್ಚು ಹೆಚ್ಚು ಕಿಲೋಮೀಟರ್ ಬಳಕೆಗೆ ಯೋಗ್ಯವಾಗುವಂತೆ ಮಾಡುವುದು.

೩ ವಾಹನಗಳ ದುರಸ್ತಿ ಕಾರ್ಯವನ್ನು ಸುಧಾರಿಸುವ ಮೂಲಕ ವಾಹನ ಅಥವಾ ಯಂತ್ರಗಳ ವಿಫಲತೆಯಿಂದ ಆಗುವ ಸಂಚಾರ (ಬ್ರೇಕ್) ರದ್ದು ಪ್ರಸಂಗಗಳನ್ನು ತಪ್ಪಿಸುವುದು ಮತ್ತು ದುರಸ್ತಿಯನ್ನು ಚುರುಕುಗೊಳಿಸಿ ವಾಹನಗಳನ್ನು ಶೀಘ್ರವಾಗಿ ಸಂಚಾರಕ್ಕಾಗಿ ಬಳಸಿಕೊಳ್ಳುವುದು.

೪ ವಾಹನ ಮಾರ್ಗಗಳ ಪುನರ್‌ರಚಿಸುವ ಮೂಲಕ ವಾಹನ ಬಳಕೆಯನ್ನು ಹೆಚ್ಚು ಮಾಡುವುದು.

೫ ಚಾಲಕರಿಗೆ ತರಬೇತಿ ಕೊಟ್ಟು ತನ್ಮೂಲಕ ಇಂಧನ ಬಳಕೆಯನ್ನು ಕಡಿಮೆ ಮಾಡುವುದರ ಜೊತೆಗೆ ವಾಹನವನ್ನು ದೀರ್ಘಕಾಲ ಬಾಳುವಂತೆ ಮಾಡುವುದು.

೬ ಪ್ರಯಾಣಿಕರಿಗೆ ಮತ್ತು ಸಿಬ್ಬಂದಿಗಳಿಗೆ ಪ್ರೋತ್ಸಾಹ ನೀಡುವುದರ ಮೂಲಕ ಸಂಸ್ಥೆಯ ಆದಾಯವನ್ನು ಹೆಚ್ಚಿಸುವುದು.

ಪೋಲಿಸ್ ವಸತಿಗಳನ್ನು ಬೈಲಹೊಂಗಲದಲ್ಲಿ ಕಟ್ಟಿಸುವ ಬಗ್ಗೆ

೭೬೬. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲದಲ್ಲಿ ಪೊಲೀಸ್ ಅಧಿಕಾರಿಗಳ ಮತ್ತು ಪೊಲೀಸ್ ಸಿಬ್ಬಂದಿಯ ವರ್ಗದವರಿಗೆ ವಸತಿಯ ಕೊರತೆ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅದನ್ನು ಹೋಗಲಾಡಿಸಲು ಸರಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು ?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—

ಅ) ಹೌದು.

ಆ) ಕರ್ನಾಟಕ ರಾಜ್ಯ ಆರಕ್ಷಕ ವಸತಿ ನಿಗಮವು ತನ್ನ ಯೋಜನೆಯಲ್ಲಿ ವಸತಿ ಗೃಹಗಳ ನಿರ್ಮಾಣದ ಕಾರ್ಯಕ್ರಮವನ್ನು ಹಂತ ಹಂತವಾಗಿ ಎತ್ತಿಕೊಳ್ಳಲಿದೆ.

ರಾಜ್ಯ ಬಂದೀಖಾನೆ ಹಾಗೂ ಖೈದಿಗಳ ಬಗ್ಗೆ

೯೧೭. ಶ್ರೀ ವೇದಾಂತ ಹೆವ್ಮಿಗೆ (ಕೃಷ್ಣರಾಜ).—ಮಾನ್ಯ ಸಾರಿಗೆ ಸಣ್ಣ ಉಳಿತಾಯ ಹಾಗೂ ಬಂದೀಖಾನೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಎಷ್ಟು ಬಂದೀಖಾನೆಗಳಿವೆ ಇದರಲ್ಲಿ ಬಯಲು ಬಂದೀಖಾನೆಗಳು ಎಷ್ಟು ?

ಆ) ಈ ಬಂದೀಖಾನೆಗಳಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವವರ ಸಂಖ್ಯೆ ಎಷ್ಟು ?

ಇ) ಬಂದೀಖಾನೆಗಳಲ್ಲಿ ಖೈದಿಗಳಿಗೆ ಯಾವ ಯಾವ ಉದ್ಯೋಗಗಳಲ್ಲಿ ತರಬೇತಿ ನೀಡಲಾಗುತ್ತಿದೆ

ಶ್ರೀ ವೀರಣ್ಣ (ಸಾರಿಗೆ ಸಣ್ಣ ಉಳಿತಾಯ ಹಾಗೂ ಬಂದೀಖಾನೆ ರಾಜ್ಯ ಸಚಿವರು).—

ಅ) ಒಟ್ಟು ೯ ಬಂದೀಖಾನೆಗಳಿವೆ. ಇವುಗಳಲ್ಲಿ ಒಂದು ಬಯಲು ಬಂದೀಖಾನೆ ಇದೆ.